(ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಿದರು)

ಅಧ್ಯಕ್ಷರು.—ಈ ಸಭೆಯಲ್ಲಿ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಅಗಲಿದ ಸದಸ್ಯರ ಕುಟುಂಬದವರಿಗೆ ಕಳುಹಿಸಿಕೊಡಲಾಗುವುದು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಎಲ್. ಓ. ಸಿ. ಹಣದ ಬಿಡುಗಡೆ

೩೩೫. ಶ್ರೀಮತಿ ಲೀಲಾದೇವಿ ಆರ್, ಪ್ರಸಾದ್ (ಅಥಣಿ),— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಯಾವ ಯಾವ ಇಲಾಖೆಗೆ ಎಲ್. ಓ. ಸಿ. ಕೊಡುವ ಅಧಿಕಾರವಿದೆ. ಆ ಪ್ರಕಾರ ಯಾವ ಯಾವ ಜಿಲ್ಲೆಯಲ್ಲಿ ಯಾವ ಯಾವ ಇಲಾಖೆಗಳಿಗೆ ಎಲ್. ಓ. ಸಿ. ಬಿಡುಗಡೆ ಮಾಡಲಾಗಿದೆ ?

ಆ) ಎಲ್.ಓ.ಸಿ. ಕೊಟ್ಟ ಪ್ರಕಾರ ಇಲಾಖಾವಾರು ಹಾಗೂ ಜಿಲ್ಲಾವಾರು ಬಿಡುಗಡೆ ಆಗಿರುವ ಹಣವೆಷ್ಟು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು),—

ಅ) ರಾಜ್ಯ ಸರ್ಕಾರದಲ್ಲಿ ಆರ್ಥಿಕ ಇಲಾಖೆಗೆ ಎಲ್.ಓ.ಸಿ. ಕೊಡುವ ಅಧಿಕಾರವಿದೆ. ಆ ಪ್ರಕಾರ ರಾಜ್ಯದ ಹಲವಾರು ಜಿಲ್ಲೆಗಳಲ್ಲಿರುವ ಲೋಕೋಪಯೋಗಿ ಇಲಾಖೆ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯ್ತಿ ರಾಜ್ ಇಲಾಖೆ, ರೇಷ್ಮೆ ಇಲಾಖೆಯಲ್ಲಿ ಲೋಕೋಪಯೋಗಿ ಕಾಮಗಾರಿಗಳನ್ನು ನೋಡಿ ಕೊಳ್ಳುತ್ತಿರುವ ಮುಖ್ಯ ಇಂಜಿನಿಯರು : ಇಂಜಿನಿಯರುಗಳಿಗೆ ಸರ್ಕಾರದ ನಿಯಮಗಳ ಪ್ರಕಾರ ಎಲ್.ಓ.ಸಿ.ಯನ್ನು ಬಿಡುಗಡೆ ಮಾಡಲಾಗುತ್ತದೆ. ಆದರಂತೆ ಆಯಾಯಾ ಇಂಜಿನಿಯರುಗಳಿಗೆ ಮಾತ್ರ ಎಲ್.ಓ.ಸಿ.ಯನ್ನು ಬಿಡುಗಡೆ ಮಾಡಲಾಗಿದೆ, ಬಿಡುಗಡೆಯಾದ ಹಣವನ್ನು ಯೋಜನೆಗಳಿಗೆ ನಿರ್ದಿಷ್ಟ ಕೆಲಸಗಳಿಗೆ ಉಪಯೋಗಿಸುವುದರಿಂದ ಜಿಲ್ಲಾವಾರು ಬಿಡುಗಡೆಯ ಮಾಹಿತಿ ಸಿಗುವುದಿಲ್ಲ.

ಆ) ಮೇಲೆ ಹೇಳಿದ ಇಲಾಖೆಗಳಿಗೆ ಪ್ರಸ್ತುತ ವರ್ಷದಲ್ಲಿ ಇನ್ನೂ ಬಿಡುಗಡೆಯಾಗ ಬೇಕಾಗಿರುವ ಒಟ್ಟು ಹಣ ರೂ. ೮೯.೧೯ ಕೋಟಿಗಳು.

		(ರೂ. ಕೋಟಿಗಳಲ್ಲಿ)
೧) ಲೋಕೋಪಯೋಗಿ ಇಲಾಖೆ	...	೭೭.೮೭
೨) ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯ್ತಿ ರಾಜ್ ಇಲಾಖೆ	...	೩.೫೨
೩) ರೇಷ್ಮೆ ಇಲಾಖೆ.	...	೭.೮೦
ಒಟ್ಟು	...	೮೯.೧೯

(ಇದು ೧೯-೩-೧೯೮೮ ದಿನಾಂಕದ ಪರಿಸ್ಥಿತಿಯನ್ನು ಸೂಚಿಸುತ್ತದೆ)

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.— ಸನ್ಮಾನ್ಯ ಅಧ್ಯಕ್ಷರೆ, ಈ ಮೂರು ಇಲಾಖೆಗಳಿಗೆ ಈ ವರ್ಷದಲ್ಲಿ ಇನ್ನೂ ಬಿಡುಗಡೆಯಾಗಬೇಕಾದಾಥ ಎಲ್. ಓ. ಸಿ. ಚಿತ್ರ ಇದರಲ್ಲಿ ಇದೆ. ಆದರೆ ಇಂತಹ ಡಿಸ್ಟ್ರಿಕ್ಟ್‌ಗೆ ಇಷ್ಟೇ ಹಣ ಎಂದು ಬಿಡುಗಡೆ ಮಾಡುವುದಕ್ಕೆ ಆಗುವುದಿಲ್ಲವೇ ಎಂದು ಹೇಳುತ್ತಾ ಇದ್ದೇನೆ. ಡಿಸ್ಟ್ರಿಕ್ಟ್ ಬಗ್ಗೆ ಹೇಳುವಾಗ ನೇರವಾಗಿ ನಿರ್ದಿಷ್ಟವಾದಂಥ ಕೆಲಸಕ್ಕೆ ಬಜೆಟ್‌ನಲ್ಲಿ ಇಟ್ಟಿರತಕ್ಕಂಥ ಹಿಂದು ಮೊತ್ತಕ್ಕೆ ಅನುಗುಣವಾಗಿ ಯಾವ ಆಧಾರದ ಮೇಲೆ ಪ್ರತಿ ತಿಂಗಳೂ ಎಲ್.ಓ.ಸಿ. ಬಿಡುಗಡೆ ಮಾಡುತ್ತಾ ಇದ್ದಾರೆ ಎನ್ನುವುದು ಗೊತ್ತಾಗಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.— ಈಗ ಬೇರೆ ಬೇರೆ ಇಲಾಖೆಗಳಲ್ಲಿ ಸಾಮಾನ್ಯ ಕೆಲಸ ಏನಿರುತ್ತದೆ ಅದು ಡೆವಲಪ್‌ಮೆಂಟ್ ಕೆಲಸವಾದರೂ ನಾನ್ ಪ್ಲಾನ್ ಕೆಲಸ ಆಗಿರಬಹುದು. ಅದಕ್ಕೆ ಎಲ್.ಓ.ಸಿ. ಬಿಡುಗಡೆ ಮಾಡತಕ್ಕಂಥ ಪ್ರಮೇಯ ಬರುವುದಿಲ್ಲ. ಈಗ ಯೋಜನೆಗೆ ಸಂಬಂಧಪಟ್ಟಂಥ ಕೆಲಸಗಳಲ್ಲೂ ಕೇವಲ ಈ ೩ ಡಿಪಾರ್ಟ್‌ಮೆಂಟ್‌ಗಳಿಗೆ ಮಾತ್ರ ಎಲ್.ಓ.ಸಿ. ಬಿಡುಗಡೆ ಮಾಡಲಾಗಿದೆ ಬಾಕೀದಕ್ಕೆ ತನ್ನಿಂದತಾನೇ ಎಷ್ಟು ಹಣ ಒದಗಿಸಬೇಕೋ ಅದನ್ನು ಒದಗಿಸುತ್ತಾರೆ. ಅಲ್ಲಿ ಇಷ್ಟು ದೊಡ್ಡ ಮೊತ್ತದ ಹಣವನ್ನು ಬಿಡುಗಡೆ ಮಾಡತಕ್ಕಂಥ ಅಗತ್ಯ ಬೀಳುವುದಿಲ್ಲ. ಈ ಎಲ್.ಓ.ಸಿ.ಯನ್ನು ಜಿಲ್ಲಾವಾರು ಹಂಚುವುದಿಲ್ಲ, ಕೆಲಸವಾರು ಹುಚ್ಚುತ್ತಾರೆ. ಉದಾಹರಣೆಗೆ, ಕೃಷ್ಣ ವಲಯದಲ್ಲಿರತಕ್ಕಂಥ ಯೋಜನೆಗಳಿಗೆ ಇಷ್ಟು ಹಣ ರಾಷ್ಟ್ರೀಯ ಹೆದ್ದಾರಿಗಳಿಗೆ ಇಷ್ಟು ಹಣ ಕೊಡಬೇಕು, ಅದೇರೀತಿ ರೂರಲ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್, ರೇಷ್ಮೆ ಇಲಾಖೆಗಳಲ್ಲಿ ಎಷ್ಟು ಹಣ ಬಾಕಿ ಉಳಿದಿದೆ ಅದನ್ನು ನೋಡಿಕೊಂಡು ನಮ್ಮ ಮುಖ್ಯ ಇಂಜಿನಿಯರುಗಳಿಗೆ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಎಲ್.ಓ.ಸಿ. ಬಿಡುಗಡೆ ಮಾಡುತ್ತಾರೆ. ಆದ್ಯತೆ ಪ್ರಕಾರ, ಪ್ರಿಯಾರಿಟಿ ಪ್ರಕಾರ ಬೇರೆಯವರಿಗೆ ಹಣ ಕೊಡುತ್ತಾರೆ.

ಸರ್ಕಾರದಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ

೪೪೦ ಶ್ರೀ ಎ. ಕೃಷ್ಣಪ್ಪ (ವರ್ತೂರು).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರದಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡದಿರುವುದು ನಿಜವೇ?

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ?

ಇ) ಖಾಲಿ ಇರುವ ಹುದ್ದೆಗಳನ್ನು ಎಷ್ಟು ದಿನಗಳೊಳಗೆ ಭರ್ತಿ ಮಾಡಲಾಗುವುದು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯಂವರು).—

ಅ) ಮತ್ತು ಆ) ಮತ್ತು ಇ) ಯೋಜನೇತರ ಬಾಬುಗಳ ವೆಚ್ಚವನ್ನು ಕಡಿಮೆ ಮಾಡುವ ದೃಷ್ಟಿಯಿಂದ ಮಿತವ್ಯಯ ಆದೇಶವನ್ನು ಹೊರಡಿಸಲಾಗಿದ್ದು, ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬುವ ಬಗ್ಗೆ ನಿರ್ಬಂಧವನ್ನು ಹಾಕಲಾಗಿದೆ. ಆದಾಗ್ಯೂ, ಸರ್ಕಾರವು ಪ್ರತಿ ಇಲಾಖೆಯ ಅವಶ್ಯಕತೆಯನ್ನು ಪರಿಶೀಲಿಸಿ ನಿರ್ಬಂಧನೆಯನ್ನು ಸಡಿಲಗೊಳಿಸಿದ್ದು, ಇಲಾಖೆಗಳು ಖಾಲಿ ಇರುವ ಹುದ್ದೆಗಳನ್ನು ತುಂಬಲು ಈಗಾಗಲೇ ಕ್ರಮ ಕೈಗೊಂಡಿವೆ.

ಶ್ರೀ ಎ. ಕೃಷ್ಣಪ್ಪ.— ಅಧ್ಯಕ್ಷರೆ, ಇದರಲ್ಲಿ ಯಾವಯಾವ ಇಲಾಖೆಯಲ್ಲಿ ಈ ವಿನಾಯಿತಿ ಕೊಟ್ಟಿದ್ದಾರೆಂದು ಗೊತ್ತಾಗಬೇಕು. ಯಾವ ಇಲಾಖೆಗೆ ಆದ್ಯತೆ ಮೇರೆಗೆ ಈ ಆದೇಶವನ್ನು ಕೊಡಲಾಗಿದೆ ಎಂಬ ವಿಚಾರವನ್ನು ತಿಳಿಯಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರತಕ್ಕ ಉತ್ತರ ಜನರಲ್ಲಾಗಿದೆ. ಉದಾಹರಣೆಗೆ ಪೋಲೀಸ್ ಇಲಾಖೆ, ಆರೋಗ್ಯ ಇಲಾಖೆಗೆ ರಿಯಾಯಿತಿ ತೋರಿಸಲಾಗಿದೆ. ನನಗೆ ಯಾವ ಯಾವ ಇಲಾಖೆಯಲ್ಲಿ ಹುದ್ದೆಗಳನ್ನು ಭರ್ತಿಮಾಡಲಾಗಿದೆ ಎನ್ನುವ ಅಂಕ ಸಂಖ್ಯೆ ಬೇಕು.

ಶ್ರೀ ರಾಮಕೃಷ್ಣ ಹೆಗಡೆ.— ಅವಶ್ಯಕ ಸೇವೆಗಳೆಂದು ಏನು ಹೇಳುತ್ತೇವೆ ಆ ಅಂಥ ಇಲಾಖೆಗಳಿಗೆ ಇದನ್ನು ಕಟ್ಟುನಿಟ್ಟಾಗಿ ಅನ್ವಯಿಸಿಲ್ಲ. ಆರೋಗ್ಯ ಮತ್ತು ಶಿಕ್ಷಣ ಇಲಾಖೆ ಮತ್ತು ಗೃಹ ಇಲಾಖೆಗಳಿಗೆ ಇದನ್ನು ಅನ್ವಯಿಸಿಲ್ಲ. ಇನ್ನುಳಿದ ಇಲಾಖೆಗಳಲ್ಲಿರತಕ್ಕ ಖಾಲಿ ಹುದ್ದೆಗಳನ್ನು ತುಂಬುವಾಗ ಸರ್ಕಾರದ ಈ ಆಜ್ಞೆಯನ್ನು ಗಮನದಲ್ಲಿಟ್ಟುಕೊಂಡು ತುಂಬಬೇಕೆಂದು ಹೇಳಲಾಗಿದೆ. ಇದನ್ನು ಇಪತ್ತು ನಿನ್ನೆ ಮಾಡಿದ್ದಲ್ಲ. ೯೬೭೬ನೇ ಇಸವಿಯಲ್ಲಿ ವಿಂತವ್ಯಯದ ಆಜ್ಞೆಯನ್ನು ಹೊರಡಿಸಲಾಗಿತ್ತು. ಆದರೆ, ಅವತ್ತು ಅದರ ವಿರುದ್ಧ ಟೀಕೆ ಮಾಡಲಿಲ್ಲ, ಚಳುವಳಿ ಮಾಡಲಿಲ್ಲ. ಆದರೆ, ಈ ಆಜ್ಞೆಯನ್ನು ಪುನಃ ಹೊರಡಿಸಿದಾಗ ಚಳುವಳಿಯಾಯಿತು. ನನಗನ್ನಿಸುತ್ತದೆ, ನಮ್ಮ ಯುವಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಇನ್ನುಮುಂದೆ, ಸರ್ಕಾರಿ ನೌಕರಿ ಸಿಗುವುದಿಲ್ಲ ಎನ್ನುವ ಭಯ ಮನಸ್ಸಿನಲ್ಲಿ ಆಗಕೊಡದು ಎನ್ನುವ ದೃಷ್ಟಿಯಿಂದ, ಅವರನ್ನು ಕರೆಯಿಸಿ ಮಾತನಾಡಿ, ಆ ಮೇಲೆ ವಿವರಣೆ ನೀಡಿ